# ದತ್ತಿ ನಿರ್ವಹಣಾ ನಿಯಮಗಳು

೧. ದಾನಿಗಳಿಂದ ಬರುವ ದತ್ತಿ ಹಣವನ್ನು ಅಧಿಕೃತ ಬ್ಯಾಂಕ್‌ನಲ್ಲಿ ಶಾಶ್ವತ ಠೇವಣಿಯಲ್ಲಿ ತೊಡಗಿಸಲಾಗುತ್ತದೆ.

೨. ದತ್ತಿ ಠೇವಣಿಯಿಂದ ಬರುವ ವಾರ್ಷಿಕ ಬಡ್ಡಿಯನ್ನು ಮಾತ್ರ ದಾನಿಗಳ ಆಶಯದ ಸಾಹಿತ್ಯ ಕಾರ್ಯಕ್ರಮಕ್ಕೆ ಬಳಸಲಾಗುತ್ತದೆ. ದಾನದ ಮೂಲನಿಧಿಯನ್ನು ಯಾವ ಕಾರಣದಿಂದಲೂ ಬಳಸತಕ್ಕದ್ದಲ್ಲ.

೩. ಅನಿವಾರ್ಯ ಕಾರಣಗಳಿಂದ ಒಂದು ವರ್ಷ ದತ್ತಿ ಕಾರ್ಯಕ್ರಮ ನಡೆಯದಿದ್ದಲ್ಲಿ, ಮಾರನೆಯ ವರ್ಷ ಎರಡೂ ವರ್ಷದ ಬಡ್ಡಿ ಸೇರಿಸಿ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

೪. ದತ್ತಿ ಕಾರ್ಯಕ್ರಮಗಳನ್ನು ದಾನಿಗಳು ತಮ್ಮ ದಾನ ಪತ್ರದಲ್ಲಿ ತಿಳಿಸಿರುವಂತೆಯೇ ನಡೆಸತಕ್ಕದ್ದು, ತೀರ ಅನಿವಾರ್ಯ ಸಂದರ್ಭಗಳಲ್ಲಿ ದಾನಿಗಳಿಗೆ ತಿಳಿಸಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

೫. ಕಾರ್ಯಕ್ರಮ ಎಲ್ಲೇ ನಡೆಯಲಿ, ಯಾವಾಗಲೇ ನಡೆಯಲಿ, ಸಂಬಂಧಪಟ್ಟ ದಾನಿಗಳಿಗೆ ಕನಿಷ್ಠ ೫ ಕರೆಯೋಲೆಗಳನ್ನು ಕಳುಹಿಸಲಾಗುತ್ತದೆ.

೬. ದತ್ತಿ ಕಾರ್ಯಕ್ರಮ ನಡೆಯುವಾಗ ದತ್ತಿ ದಾನಿಗಳ ಪರಿಚಯ, ದತ್ತಿಯ ಆಶಯ ಮೊದಲಾದವನ್ನು ಸಭೆಗೆ ತಿಳಿಸಲಾಗುತ್ತದೆ.

೭. ಪ್ರತಿಯೊಬ್ಬ ದಾನಿಗೂ ಅಧಿಕೃತ ರಸೀದಿ ಮತ್ತು ದಾನದ ದೃಢಪತ್ರ ನೀಡಲಾಗುತ್ತದೆ.

೮. ದಾನಿಗಳು ನಿರ್ದಿಷ್ಟ ವಿಷಯ, ಸ್ಥಳ, ದಿನಾಂಕಗಳನ್ನು ತಿಳಿಸಿದ ಸಂದರ್ಭ ವಿನಾ ಉಳಿದಂತೆ ದತ್ತಿ ಕಾರ್ಯಕ್ರಮಗಳನ್ನು ರಾಜ್ಯದ ಬೇರೆ ಬೇರೆ ಕಡೆ ನಡೆಸಲಾಗುತ್ತದೆ.

೯. ಪ್ರತಿಯೊಂದು ತಾಲ್ಲೂಕಿನಲ್ಲಿ ಸಂಗ್ರಹವಾದ ದತ್ತಿಗಳ ಸಂಖ್ಯೆಯಷ್ಟು ಕಾರ್ಯಕ್ರಮಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಆ ತಾಲ್ಲೂಕಿಗೇ ನೀಡಲಾಗುತ್ತದೆ.

೧೦. ವರ್ಷಾರಂಭದಲ್ಲೇ ಪರಿಷತ್ತಿನ ಕೇಂದ್ರ ಕಾರ್ಯಾಲಯ ಜಿಲ್ಲಾ ಘಟಕಗಳಿಗೆ ಕಳುಹಿಸುವ ದತ್ತಿ ಕಾರ್ಯಕ್ರಮಗಳ ವೇಳಾಪಟ್ಟಿಗೆ ಅನುಗುಣವಾಗಿ ಜಿಲ್ಲಾ ಘಟಕಗಳು ತಮ್ಮ ವ್ಯಾಪ್ತಿಯ ತಾಲ್ಲೂಕು ಘಟಕಗಳ ಮೂಲಕ ಅಥವಾ ನೇರವಾಗಿ ದತ್ತಿ ಕಾರ್ಯಕ್ರಮ ನಡೆಸುತ್ತವೆ. ದತ್ತಿ ಉಪನ್ಯಾಸಗಳಿಗೆ ಸಂಬಂಧಪಟ್ಟ ವಿಷಯ ತಜ್ಞರನ್ನು ಜಿಲ್ಲಾ ಅಧ್ಯಕ್ಷರೇ ಆರಿಸಿಕೊಳ್ಳುತ್ತಾರೆ.

೧೧. ದತ್ತಿ ನಿಧಿಯಲ್ಲಿ ಸ್ಪರ್ಧೆಗಳನ್ನು ನಡೆಸಬೇಕಿದ್ದಲ್ಲಿ ಅವನ್ನು ಕೇಂದ್ರ ಪರಿಷತ್ತೇ ನೇರವಾಗಿ ಅಥವಾ ಯಾವುದಾದರೂ ಜಿಲ್ಲಾ ಘಟಕಗಳ ಮೂಲಕ ನಡೆಸುತ್ತದೆ. ದತ್ತಿನಿಧಿ ಬಡ್ಡಿಯಲ್ಲಿ ಗ್ರಂಥ ಪ್ರಕಟಿಸುವುದಿದ್ದಲ್ಲಿ ಆ ಗ್ರಂಥದ ಒಳ ಶೀರ್ಷಿಕಾ ವಿಭಾಗದಲ್ಲಿ ದತ್ತಿ ಹೆಸರನ್ನು ಮುದ್ರಿಸಲಾಗುತ್ತದೆ.

೧೨. ಹಣಕಾಸಿನ ಅನುಕೂಲವಿದ್ದಲ್ಲಿ ಜಿಲ್ಲೆಯಲ್ಲಿ ನಡೆಯುವ ಎಲ್ಲ ದತ್ತಿ ಉಪನ್ಯಾಸಗಳ ಸಂಗ್ರಹವನ್ನು ಒಂದು ಪುಸ್ತಕ ರೂಪದಲ್ಲಿ ಆಯಾ ಜಿಲ್ಲಾ ಘಟಕಗಳೇ ಹೊರತರಬಹುದು.

೧೩. ದತ್ತಿ ಕಾರ್ಯಕ್ರಮದ ಬಗ್ಗೆ ಸರಿಯಾದ ಪ್ರಚಾರ ನೀಡಿ ಸಾಧ್ಯವಾದಷ್ಟು ಹೆಚ್ಚು ಜನ ಕಾರ್ಯಕ್ರಮದ ಲಾಭ ಪಡೆಯುವಂತೆ ಮಾಡಲಾಗುತ್ತದೆ.

೧೪. ನಿರ್ಧರಿತ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ನಡೆಸುವುದಿದ್ದಲ್ಲಿ ಅದಕ್ಕಾಗಿ ಆಗುವ ಹೆಚ್ಚಿನ ವೆಚ್ಚವನ್ನು ದಾನಿಗಳೇ ಭರಿಸಬೇಕಾಗುತ್ತದೆ.

೧೫. ದತ್ತಿ ನಿಧಿ ಸಂಗ್ರಹದ ಬಗ್ಗೆ ಕೇಂದ್ರ ಕಾರ್ಯಾಲಯದಲ್ಲಿ ಪ್ರತಿಯೊಂದು ಜಿಲ್ಲೆಗೂ ಪ್ರತ್ಯೇಕ ದಾಖಲೆ ಪುಸ್ತಕವಿರುತ್ತದೆ. ಆ ಪುಸ್ತಕದಲ್ಲಿ ದತ್ತಿಯ ಕ್ರಮಸಂಖ್ಯೆ, ದಾನಿಗಳ ಹೆಸರು ಮತ್ತು ವಿಳಾಸ, ದಾನಿಗಳ ಆಶಯ, ಕಾರ್ಯಕ್ರಮ ನಡೆಯಬೇಕಾದ ಸಂದರ್ಭ – ಇತ್ಯಾದಿ ವಿವರಗಳಿರುತ್ತವೆ.

೧೬. ದಾನಿಗಳ ಅನುಮತಿಯಿಲ್ಲದೆ ಯಾವ ಕಾರಣದಿಂದಲೂ ದತ್ತಿ ಉದ್ದೇಶವನ್ನು ಬದಲಾಯಿಸತಕ್ಕದ್ದಲ್ಲ; ಸಾಧ್ಯವಾದಷ್ಟು ಮಟ್ಟಿಗೆ ಬೇರೆ ಕಾರ್ಯಕ್ರಮಗಳೊಂದಿಗೆ ಸೇರಿಸಿ ನಡೆಸಬಾರದು.

೧೭. ದತ್ತಿ ದಾನಿಗಳ ಆಶಯದ ದಿನ ಹಾಗೂ ಸ್ಥಳದಲ್ಲಿ ಕಾರ್ಯಕ್ರಮ ನಡೆಯಲು ಅನನುಕೂಲವಿದ್ದಲ್ಲಿ ಅದನ್ನು ದಾನಿಗಳ ಗಮನಕ್ಕೆ ತಂದು ಮತ್ತೊಂದು ದಿನ ಅಥವಾ ಸ್ಥಳ ಆಯ್ಕೆ ಮಾಡಿ ಕಾರ್ಯಕ್ರಮ ನಡೆಸಲಾಗುತ್ತದೆ.

೧೮. ಪರಿಷತ್ತಿನ ಅಧ್ಯಕ್ಷರು ನೇಮಿಸುವ ಮೂರು ಜನ ತಜ್ಞರುಳ್ಳ ಒಂದು ಸಮಿತಿ ದತ್ತಿ ಕಾರ್ಯಕ್ರಮಗಳನ್ನು ಮೇಲ್ಕಂಡ ನಿಯಮಗಳಿಗೆ ಅನುಸಾರ ವಿವಿಧ ಜಿಲ್ಲಾ ಘಟಕಗಳಿಗೆ ಹಂಚುತ್ತದೆ. ಪರಿಷತ್ತಿನ ಅಧ್ಯಕ್ಷರೇ ಈ ಉಪಸಮಿತಿಯ ಅಧ್ಯಕ್ಷರಾಗಿರುತ್ತಾರೆ.

೧೯. ದತ್ತಿ ನಿಯಮಾವಳಿಗೆ ಅನುಗುಣವಾಗಿ ಪರಿಷತ್ತಿನ ಪದಾಧಿಕಾರಿಗಳು ಕಾರ್ಯಕ್ರಮ ನಡೆಸಲು ಬದ್ಧರಾಗಿರುತ್ತಾರೆ.

ಗೊ.ರು. ಚನ್ನಬಸಪ್ಪ
ಅಧ್ಯಕ್ಷ

Scanned with CamScanner